ಡಾಕ್ಟರಮ್ಮನಿಗೆ ಇದನ್ನೆಲ್ಲಾ ಹೇಳುವ ಧೈರ್ಯ ನನಗಿರಲಿಲ್ಲ.

ಡಾಕ್ಟರಮ್ಮ ತಮ್ಮ ಕಾರು, ಮನೆ, ಕ್ಲಿನಿಕ್, ಅಗಾಧ ಬ್ಯಾಂಕ್ ಠೇವಣಿ ಹೀಗೆ ಎಲ್ಲವನ್ನೂ ಅವರು ಸ್ವಾಮೀಜಿ ಹೆಸರಿಗೆ ವಿಲ್ ಮಾಡಿದ್ದರು. ವಿಲ್ ಪತ್ರವನ್ನು ಅವರ ಕೈಗಿಡುವ ಸಂದರ್ಭದಲ್ಲಿ ನಾನು ನಿಂತಲ್ಲೇ ಕಂಪಿಸಿದೆ.

'ಸ್ವಾಮೀಜಿ ಬದಲಿಗೆ ಮಠದ ಹೆಸರಿಗೆ ವಿಲ್ ಮಾಡಬಹುದಿತ್ತು...' ಎಂದು ಅಸ್ಪಷ್ಟವಾಗಿ ಹೇಳಿದ ನೆನಪು.

ಡಾಕ್ಟರಮ್ಮ ಮತ್ತೆ ದುರುಗುಟ್ಟಿ ನೋಡಿದಂತಾಯಿತು. ಮುಂದಿನ ಹತ್ತು ನಿಮಿಷಗಳಲ್ಲಿ ನಾನು ಮನೆಯಲ್ಲಿದ್ದೆ.

ಎರಡು ದಿನ ಡಾಕ್ಟರಮ್ಮನ ವಿಲ್ ಬಗ್ಗೇ ಆಲೋಚನೆ. ಆದರೆ ಬೇರೆ ಕೆಲಸಗಳ ಒತ್ತಡದ ಮಧ್ಯೆ ಅದರ ಆಲೋಚನೆ ನಿಧಾನವಾಗಿ ಮರೆಯಾಗತೊಡಗಿತು. ವಾರದೊಳಗೆ ಅದನ್ನು ಸಂಪೂರ್ಣ ಮರೆತು ಬಿಟ್ಟಿದ್ದೆ.

ಆದರೆ ಡಾಕ್ಟರಮ್ಮನ ಕಥೆಗೆ ಟ್ವಿಸ್ಟ್ ಸಿಕ್ಕಿದ್ದು ಸುಮಾರು ಎರಡು ತಿಂಗಳ ಬಳಿಕ. ಒಂದು ದಿನ ರಾತ್ರಿ ಸುಮಾರು 11 ಗಂಟೆಯಾಗಿರಬೇಕು. ನಾಗಪ್ಪನ ಮಗ ಮನೆಗೆ ಓಡಿ ಬಂದಿದ್ದ. ಯಾರೋ ನಾಗಪ್ಪನ ಮನೆ ಬಳಿ ಬಂದು ಮಾತನಾಡಿಸುವ ನೆಪದಲ್ಲಿ ಹೊರಗೆ ಕರೆದು ಆತನಿಗೆ ಹೊಡೆದಿದ್ದರು; ತಲೆ ತುಂಬಾ ಗಾಯ. ಡಾಕ್ಟರಮ್ಮನ ಬಳಿಗೆ ಅಪ್ಪನನ್ನು ಕರೆದುಕೊಂಡು ಹೋಗಲು ಸಹಾಯ ಕೇಳಿ ಆತ ಬಂದಿದ್ದ. ತಕ್ಷಣ ಹೊರಟು ನಿಂತೆ. ಮೊದಲಿಗೆ ನಾಗಪ್ಪನ ತಲೆಗೆ ಬಟ್ಟೆ ಸುತ್ತಿ ಕಾರಿನಲ್ಲಿ ಡಾಕ್ಟರಮ್ಮನ ಮನೆಯತ್ತ ಹೊರಟೆವು. ನಾಗಪ್ಪನ ಪರಿಸ್ಥಿತಿ ಅಂತಾ ಗಂಭೀರವಾಗೇನು ಇರಲಿಲ್ಲ. ಸುಮಾರು 10 ನಿಮಿಷದ ದಾರಿ. ಡಾಕ್ಟರಮ್ಮನ ಮನೆ ಗೇಟ್ ಬಳಿ ಕಾರು ನಿಲ್ಲಿಸಿದೆ. ನೋಡಿದರೆ ಡಾಕ್ಟರಮ್ಮನ ಮನೆಯ ಎಲ್ಲಾ ಲೈಟ್‌ಗಳು ಸ್ವಿಚ್ ಆಫ್ ಆಗಿದ್ದವು. ಡಾಕ್ಟರಮ್ಮ ಮಲಗಿದ್ದಾರೆ; ಇನ್ನು ಅವರನ್ನು ಎಚ್ಚರಿಸುವುದೊಂದು ದೊಡ್ಡ ಕೆಲಸ ಎನ್ನುತ್ತಲೇ ಗೇಟ್ ದಾಟಿ ಮನೆಯ ಬಾಗಿಲ ಬಳಿ ತೆರಳಿದೆವು.

ಇನ್ನೇನು ಕಾಲಿಂಗ್ ಬೆಲ್ ಒತ್ತಬೇಕೆನ್ನುವಷ್ಟರಲ್ಲಿ ಮನೆಯೊಳಗಿಂದ ಡಾಕ್ಟರಮ್ಮನ ಅಳುವಿನ ಧ್ವನಿ. ಅತಿ ಸಣ್ಣ ಅಳುವಿನ ಧ್ವನಿಯಲ್ಲಿ ಯಾರ ಜತೆಗೋ ಅವರು ಜಗಳವಾಡುತ್ತಿದ್ದಂತೆ ಅನಿಸಿತು. ಇನ್ನೊಂದು ಪುರುಷ ಧ್ವನಿ ಅವರನ್ನು ಸಮಾಧಾನ ಮಾಡುತ್ತಿರುವಂತೆ ಅನಿಸಿತು. ಈ ರಾತ್ರಿ ಇದೇನಪ್ಪಾ ಅಂದುಕೊಂಡೆ. ನಾಗಪ್ಪ ಸದ್ದು ಮಾಡದಂತೆ ಸಂಜ್ಞೆ ಮಾಡಿದ.

ಸಾಯುವ ಕಾಲಕ್ಕಾದರೂ ನೆಮ್ಮದಿಯಾಗಿರೋಣ ಎಂದು ಆಸ್ತಿಯನ್ನು ನಿನ್ನ ಹೆಸರಿಗೆ ವಿಲ್ ಮಾಡಿದೆ; ಆದರೆ ನಿನಗೆ ಆಸ್ತಿ ಬೇಕೇ ವಿನಹಃ ನಾನಲ್ಲ ಎನ್ನುತ್ತಿದ್ದರು ಡಾಕ್ಟರ್. ನನ್ನ ಪದವಿಯ ಮುಂದೆ ನಿನ್ನ ಆಸ್ತಿಯ ಕಿಮ್ಮತ್ತು ಕಡಿಮೆ ಎನ್ನುತ್ತಿತ್ತು ಪುರುಷ ಧ್ವನಿ.

ಹೀಗಂತ ನೀನು ಮೊದಲೆ ಹೇಳಿದ್ದರೆ, ನಾನು ಸಂಬಂಧಿಕರಿಗೋ, ಅನಾಥಾಶ್ರಮಕ್ಕೋ ದಾನ ಮಾಡುತ್ತಿದ್ದೆ ಎನ್ನುವ ವಾದ ಡಾಕ್ಟರಮ್ಮನದ್ದು.

ಅವರಿಗಿಂತ ಹೆಚ್ಚು ಸಮರ್ಥವಾಗಿ ಸಮಾಜ ಸೇವೆಗೆ ನಿನ್ನ ಆಸ್ತಿ ಬಳಸಲು ಸಾಧ್ಯವಿರುವುದು ನನಗೇ ಅನ್ನುವ ಸಮರ್ಥನೆ ಆ ಪುರುಷನದ್ದು. ನನಗೆ ಆಗಲೇ ಖಚಿತವಾಯಿತು. ಇದು ಸ್ವಾಮೀಜಿ– ಡಾಕ್ಟರಮ್ಮನ ನಡುವಿನ ಗಲಾಟೆ ಎಂದು.

ಗಲಾಟೆ ಮುಂದುವರಿಯಿತು. ಒಬ್ಬಳೇ ಇದ್ದು ಸಾಕಾಯಿತು; ನಿನಗಾಗಿ ನಾನು ಎಲ್ಲರನ್ನೂ ಎಷ್ಟು ವರ್ಷದಿಂದ ದೂರವಿಟ್ಟಿದ್ದೇನೆ. ಈಗ ಕನಿಷ್ಠ ಆಶ್ರಮದಲ್ಲಾದರೂ ನನಗೆ ಆಶ್ರಯ ಕಲ್ಪಿಸಿ ಎನ್ನುವ ಮೊರೆ ಡಾಕ್ಟರಮ್ಮನದ್ದು. ಹೆಣ್ಣು ಮಕ್ಕಳಿಗೆ ಪೀಠದ ಬಾಗಿಲು ತೆರೆಯುವದಿಲ್ಲ ಎನ್ನುವ ಖಡಕ್ ಮಾತು ಸ್ವಾಮೀಜಿಯದ್ದು.

ಹೆಣ್ಣಿನ ಆಸ್ತಿಗೆ ಇಲ್ಲದ ಮೈಲಿಗೆ ಜೀವಕ್ಕೆ ಏಕೆ ಎನ್ನುವ ಪ್ರತಿ ಪ್ರಶ್ನೆ. ಹಾಗೆ ಮಾಡಿದರೆ ಆಶ್ರಮದ ತುಂಬೆಲ್ಲಾ ಹೆಣ್ಣು ಮಕ್ಕಳೇ ತುಂಬಿ ಹೋಗಬಹುದು ಎನ್ನುವ ಪ್ರತ್ಯುತ್ತರ.

ಇದ್ದಕ್ಕಿದ್ದಂತೆ ಮನೆಯಲ್ಲಿ ಸಾಮಾನುಗಳನ್ನು ಎಸೆಯಲಾರಂಭಿಸಿದ ಶಬ್ದ. ಪುರುಷ ಧ್ವನಿ ನಿಂತು ಹೋಯಿತು.

'ತಾನು ಜೀವ ಇರುವಾಗ ಒಂಟಿಯಾಗಲು ನೀವ್ಯಾರೂ ಬಿಡಲಿಲ್ಲ. ತನಗೆ ಒಂಟಿಯಾಗಿ ಇರಬೇಕೆಂಬ ಆಸೆ ಇದ್ದರೂ ಹಣ ನೋಡಿ ಎಲ್ಲರೂ ಸ್ಪರ್ಧೆಯ ರೀತಿಯಲ್ಲಿ ಮೈ ಮೇಲೆ ಬೀಳುತ್ತಿದ್ದರು. ವಿಲ್ ಬರೆಯುವವರೆಗೆ ಬಂಧುಗಳ ಪಾಲಿಗೆ ನಾನು ಕಣ್ಮಣಿ. ಯಾವಾಗ ನನ್ನ ವಿಲ್ ಸುದ್ದಿ ಹೊರ ಬಿತ್ತೋ ಎಲ್ಲರೂ ದೂರವಾದರು. ನೀನು ಸ್ವಾಮೀಜಿಯಲ್ಲ; ಪರಮ ನೀಚ. ನನ್ನ ಆಸ್ತಿಯನ್ನ ಮಠಕ್ಕೆ ಪಡೆದುಕೊಳ್ಳಲು ನಿನಗೆ ಯಾವುದೇ ಸಮಸ್ಯೆ ಕಾಡಲಿಲ್ಲ. ಆದರೆ ನನಗೆ ಕಷ್ಟಗಳು ಎದುರಾದಾಗ ನಾನು ಒಂಟಿ ಹೆಣ್ಣು; ಹೆಣ್ಣಿನ ಮನೆಗೆ ಸ್ವಾಮೀಜಿ ಕಾಲಿಡಬಾರದು ಎಂಬ ಸಬೂಬು' ಎನ್ನುವ ಮಾತುಗಳು ಒಳಗಿನಿಂದ ತೂರಿ ಬಂದವು.

ಇನ್ನೇನು ಗಲಾಟೆ ತಾರಕಕ್ಕೇರುತ್ತದೆ ಎಂದಾಗ ನಾಗಪ್ಪ ಬಾಗಿಲು ತಟ್ಟಿದ. ಒಳಗಿನಿಂದ ಯಾರೋ ಓಡಿದ ಸದ್ದು. ಸುಮಾರು ನಿಮಿಷಗಳ ಬಳಿಕ ಡಾಕ್ಟರಮ್ಮ ಬಾಗಿಲು ತೆಗೆದರು. ಮುಖದಲ್ಲಿ ಎಂದಿನ ನಿರ್ಲಿಪ್ತತೆ. ನಾಗಪ್ಪನಿಗೆ ಯಾವುದೋ ಇಂಜೆಕ್ಷನ್ ನೀಡಿ ಬ್ಯಾಂಡೇಜ್ ಕಟ್ಟಿ ಕಳುಹಿಸಿದರು. ಹೊರಡುವಾಗ ಮನೆಯನ್ನೊಮ್ಮೆ ದಿಟ್ಟಿಸಿದೆ. ಹರಿದ ಕಾವಿ ವಸ್ತ್ರವೊಂದು ಕಣ್ಣಿಗೆ ಬಿತ್ತು.

ವಾಪಸ್ ಬರುವಾಗ ನಾಗಪ್ಪನಲ್ಲಿ ಕೇಳಿದೆ. ಹಲ್ಲೆ ನಡೆಸಿದ್ದು ಯಾರೆಂದು? ಉತ್ತರ ಹೇಳಲೂ ಇಲ್ಲ; ಪೊಲೀಸರಿಗೆ ಆತ ದೂರು ಕೊಟ್ಟದ್ದು ಗೊತ್ತಾಗಲಿಲ್ಲ. ಒಂದೆರಡು ದಿನಗಳಲ್ಲಿ ಡಾಕ್ಟರಮ್ಮ ಕ್ಲಿನಿಕ್ ಮುಚ್ಚಿದ ಸುದ್ದಿ ಬಂತು.

5

ಸ್ವಾಮೀಜಿ ಜತೆಗೆ ಡಾಕ್ಟರಮ್ಮ ಗಲಾಟೆ ಮಾಡಿದ್ದನ್ನು ಕೇಳಿದ್ದ ನನಗೆ ಮುಂದೇನಾಗುತ್ತೋ ಅಂತಾ ಹೆದರಿಕೆ. ಒಂದು ದಿನ ನಾಗಪ್ಪನಲ್ಲಿ ಕೇಳಿದೆ– 'ಡಾಕ್ಟರಮ್ಮ ಕ್ಲಿನಿಕ್ ಯಾಕೆ ಬಂದ್ ಮಾಡಿದ್ದಾರೆ ಎಂದು?'

'ನನಗೂ ಗೊತ್ತಿಲ್ಲ. ಮನೆಯೊಳಗೆ ಒಬ್ಬರೆ ಇರ್ತಾರೆ. ಇಡೀ ದಿನ ಬೈತಾ ಇರ್ತಾರೆ ಅಥವಾ ಅಳ್ತಾರೆ' ಎಂದ.

'ಯಾರಿಗೆಲ್ಲಾ ಬೈಯೋದು? ಅಳೋದ ಯಾಕಂತೆ.' ಎಂದು ಕುತೂಹಲದಿಂದ ಕೇಳಿದೆ.

'ಮತ್ಯಾರಿಗೆ? ಸ್ವಾಮೀಜಿಗೆ! ಬಹುಶಃ ಸ್ವಾಮೀಜಿ ಆಕೆಗೆ ಏನೋ ಮೋಸ ಮಾಡಿದ್ದಾನೆ' ಎಂದ ನಾಗಪ್ಪ.

'ಹಾಗಾದ್ರೆ ವಿಲ್ ಕ್ಯಾನ್ಸಲ್ ಮಾಡಿಸಬಹುದಲ್ವಾ?' ಎಂದೆ.

'ಅದೇ ವಿಚಿತ್ರ. ನಾನೂ ಹಾಗೇ ಹೇಳಿದ್ದೆ. ಆದರೆ ಡಾಕ್ಟರಮ್ಮನಿಗೆ ಏಕೋ ಮನಸ್ಸಿಲ್ಲ' ಎಂದ.

* * *

ಡಾಕ್ಟರಮ್ಮ ಸತ್ತ ದಿನ ಅವರ ಬಂಗಲೆಯಲ್ಲಿ ಇದ್ದದ್ದು ಬರೀ ಸೆಕ್ಯೂರಿಟಿ ಗಾರ್ಡ್ ನಾಗಪ್ಪ ಮಾತ್ರ. ರಾತ್ರಿ ಸುಮಾರು 8 ಗಂಟೆವರೆಗೆ ಆತ ಯಾರಾದರೂ ಹೆಣ ನೋಡಲು ಬರುತ್ತಾರೋ ಎಂದು ಕಾದಿದ್ದ. ಯಾರೂ ಬರಲಿಲ್ಲ. ಕೆಲವರು ನಾಳೆ ಬೆಳಗ್ಗೆ ಬರುವುದಾಗಿ ಮನೆಯ ಸ್ಥಿರ ದೂರವಾಣಿಗೆ ಫೋನ್ ಮಾಡಿ ಹೇಳಿದ್ದರು. ನಾಗಪ್ಪ ಡಾಕ್ಟರಮ್ಮನ ಸೇಹಿತೆಯೊಬ್ಬರಿಗೆ ಫೋನ್ ಮಾಡಿ ರಾತ್ರಿ ಮನೆಯಲ್ಲಿ ಉಳಿಯಲು ಬನ್ನಿ; ಒಬ್ಬನಿಗೆ ಇರಲು ಸಾಧ್ಯವಿಲ್ಲ ಎಂದು ಹೇಳಿದ್ದ. ಆಕೆ ಕೂಡಾ ಹೆಣದ ಜತೆ ರಾತ್ರಿ ಇರಲು ಸಾಧ್ಯವಿಲ್ಲ ಎಂದು ತಿಳಿಸಿದಳು. ಸ್ವಾಮೀಜಿಯಂತೂ ವಿಷಯ ತಿಳಿದ ಕೂಡಲೇ ತನ್ನ ಧ್ಯಾನದ ಕೊಠಡಿಗೆ ತೆರಳಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡ.

ಕೊನೆಗೆ ನಿರ್ವಾಹವಿಲ್ಲದೆ ನಾಗಪ್ಪ ಹೆಣವನ್ನು ಮನೆಯಲ್ಲೇ ಬಿಟ್ಟು ಎಲ್ಲಾ ಲೈಟ್‌ಗಳನ್ನು ಉರಿಸಿಟ್ಟು ತನ್ನ ಮನೆಗೆ ಹಿಂತಿರುಗಿದ. ಹೀಗೆ ಮನೆಗೆ ಬಂದವನೇ ನನಗೆ ಡಾಕ್ಟರಮ್ಮನ ಸತ್ತ ಸುದ್ದಿ ತಿಳಿಸಿದ.

ರಾತ್ರಿ ಇಡೀ ಹೆಣ ಏಕಾಂಗಿ. ಬಹುಶಃ ಹೆಣ ಕೂಡಾ ತುಂಬಾ ಅತ್ತಿರಬಹುದು ಅಂದುಕೊಂಡೆ!

ಮನುಷ್ಯ ಏಕಾಂಗಿತನವನ್ನು ಪ್ರೀತಿಸಬಹುದು; ಆದರೆ ಸತ್ತ ಹೆಣಕ್ಕೂ ಈ ದುರ್ಗತಿಯೇ ಎಂಬ ಭಾವ ಒಂದು ಕ್ಷಣ ಮೂಡಿತು.

ಮರುದಿನ ಬೆಳಗ್ಗೆ, ನಾನು ಊಹಿಸಿದ್ದಂತೆ ಡಾಕ್ಟರಮ್ಮ ಸತ್ತ ನ್ಯೂಸ್ ಎಲ್ಲಾ ಚಾನೆಲ್‌ಗಳಲ್ಲೂ ಬ್ರೇಕಿಂಗ್ ನ್ಯೂಸ್ ಎಂದು ಬರುತ್ತಿತ್ತು. ಮನೆ ಎದುರು ನೂರಾರು ಜನ ಸೇರಿದ ಚಿತ್ರಾವಳಿ. ವಿಲ್ ಮೂಲಕ ಆಸ್ತಿ ಪಡೆದ ಮಹಾಸ್ವಾಮಿಯಿಂದ ಅಮೋಘ ಭಾಷಣ. ಹೆಣಕ್ಕೆ ಸರ್ಕಾರಿ ಅಧಿಕಾರಿಗಳು, ಸಚಿವರು, ಶಾಸಕರು ಹೀಗೆ ಎಲ್ಲರಿಂದಲೂ ಕೊನೆಯ ಗೌರವಾರ್ಪಣೆ. ಇಂತಹ ವೈದ್ಯರ ಸಂಖ್ಯೆ ಸಾವಿರವಾಗಲಿ ಎಂಬ ಘೋಷಣೆ ನಡುವೆ ಮೃತ ದೇಹವನ್ನು ಮಣ್ಣು ಮಾಡಲಾಯಿತು. ಪತ್ರಿಕೆಗಳಲ್ಲೆಲ್ಲಾ ಕೂಡಾ ಅದೇ ದೊಡ್ಡ ಸುದ್ದಿ. ಎಲ್ಲೆಡೆ ಮೌನಾಚರಣೆ; ಶ್ರದ್ಧಾಂಜಲಿ ಸಭೆಗಳೊಂದಿಗೆ ಅಗಲಿದ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು.